# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.1136-2020** **ಡಿ. ಡಬ್ಲುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹರಿಕುಮಾರ್<br>ಸಿಂಧುವಳ್ಳಿ ಗ್ರಾಮ, ನಂಜನಗೂಡು ತಾ. |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 22-06-2024.** |

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಈ.ಎಂ.ಕೆ ವಕೀಲರಿಂದಃ**

ಪಿರ್ಯಾದಿದಾರರು ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ನನಗೆ ವಕೀಲರ ಮುಖೇನ ತಿಳುವಳಿಕೆ ನೀಡಿದ್ದು, ಸದರಿ ತಿಳುವಳಿಕೆಯು ನನಗೆ ಜಾರಿ ಆಗಿರುತ್ತದ ಎಂದರೆ ಸರಿ. ನಾನು ಸದರಿ ತಿಳುವಳಿಕೆಯನ್ನು ನಿಪಿ-5 ರಂತೆ ಖುದ್ದಾಗಿ ಸ್ವೀಕರಿಸಿರುತ್ತೇನೆ ಎಂದರೆ ಸರಿ. ನಿಪಿ-1(ಎ) ಸಹಿ ನನ್ನದಾಗಿರುತ್ತದೆ ಎಂದರೆ ಸರಿ. ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-4 ತಿಳುವಳಿಕೆಯಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನಾನು ಸದರಿ ನೋಟಿಸಿಗೆ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಿರ್ಯಾದಿದಾರರು ಯಾರು ಎಂದು ನನಗೆ ತಿಳಿದಿರಲಿಲ್ಲವಾದ್ದರಿಂದ ನಾನು ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನೋಟಿಸ್ ನನಗೆ ತಲುಪಿದ ನಂತರ ಪಿರ್ಯಾದಿದಾರರನ್ನು ಭೇಟಿ ಅವರು ಯಾರು ಎಂದು ವಿಚಾರಣೆ ಮಾಡಿರುತ್ತೇನೆ. ಪಿರ್ಯಾದಿದಾರರನ್ನು ಭೇಟಿ ಮಾಡಿ ವಿಚಾರಣೆ ಮಾಡಿದ ನಂತರ ಸ್ವತಃ ನಾನಾಗಲಿ, ನನ್ನ ವಕೀಲರ ಮುಖೇನವಾಗಲಿ ಅವರಿಗೆ ಪ್ರತ್ಯುತ್ತರವನ್ನು ನೀಡಲು ನನಗೆ ತೊಂದರೆ ಇರಲಿಲ್ಲ.

ಪಿರ್ಯಾದಿದಾರರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ನಿಮಗೆ ಏನಾದರೂ ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಮತ್ತು ಪಿರ್ಯಾದಿದಾರರ ಚಿಕ್ಕಪ್ಪನವರ ನಡುವೆ ಚೀಟಿ ವ್ಯವಹಾರ ಇದ್ದುದ್ದರಿಂದ ನಾನು ಪಿರ್ಯಾದಿದಾರರ ವಿರುದ್ಧ ಯಾವುದೇ ಪಿರ್ಯಾದನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

2. ಪಿರ್ಯಾದಿದಾರರ ಚಿಕ್ಕಪ್ಪನವರ ವಿರುದ್ಧ ನಿಮಗೆ ಕಾನೂನು ಕ್ರಮ ತೆಗೆದುಕೊಳ್ಳಲು ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ಮುಂದುವರೆದು ನಾನು ಪಿರ್ಯಾದಿದಾರರ ಚಿಕ್ಕಪ್ಪನವರನ್ನು ಈ ಪ್ರಕರಣವನ್ನು ಸಲ್ಲಿಸಿದ ಸಮಯ 8-10 ಭಾರಿ ವಿಚಾರಣೆ ಮಾಡಿದ್ದು, ಆ ಸಮಯ ಹಣವನ್ನು ಮರುಪಾವತಿ ಮಾಡಿದ ಪಕ್ಷದಲ್ಲಿ ತಾನು ಪ್ರಕರಣವನ್ನು ಹಿಂಪಡೆಯುವುದಾಗಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ನಾನು ಹೇಳುವಂತೆ ನನ್ನ ಮತ್ತು ಪಿರ್ಯಾದಿದಾರರ ಚಿಕ್ಕಪ್ಪನವರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ನೇರ-ನೇರವಾಗಿ ನನ್ನ ಮತ್ತು ಪಿರ್ಯಾದಿದಾರರ ನಡುವೆ ಹಣಕಾಸಿನ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ.

3. ನನಗೂ ಪಿರ್ಯಾದಿದಾರರಿಗೂ ಸ್ನೇಹವಿದ್ದು, ಸದರಿ ಸ್ನೇಹದ ಆಧಾರದ ಮೇರೆಗೆ 2020 ರ ಜನವರಿ ತಿಂಗಳಿನಲ್ಲಿ ಅವರನ್ನು ರೂ.1,00,000/- ಗಳನ್ನು ಸಾಲವಾಗಿ ಕೇಳಿದ್ದೆನು ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ ಸಾಲ ಕೇಳಿದ ಮೇರೆಗೆ ಅವರು ನನಗೆ ರೂ.90,000/- ಗಳನ್ನು ಬಡ್ಡಿ ರಹಿತವಾಗಿ ಸಾಲ ನೀಡಿದ್ದರು ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಗೆ ನೀಡಬೇಕಾ ಸಾಲದ ಬಾಬ್ತು ಮಾರ್ಚ್ ತಿಂಗಳಿನಲ್ಲಿ ಪಿರ್ಯಾದಿದಾರರಿಗೆ ಚೆಕ್ಕನ್ನು ನೀಡಿ ಹಣವನ್ನು ನಗದೀಕರಿಸಿಕೊಳ್ಳುವಂತೆ ತಿಳಿಸಿದ್ದೆನು ಎಂದರೆ ಸರಿಯಲ್ಲ. ನನ್ನ ಸಲಹೆ ಮೇರೆಗೆ ಪಿರ್ಯಾದಿದಾರರು ಚೆಕ್ಕನ್ನು ಹಾಜರುಪಡಿಸಿದ್ದು, ಆ ಸಮಯ

ಸಾಕಷ್ಟು ಹಣ ಇಲ್ಲ ಎಂದು ಚೆಕ್ ವಾಪಸ್ಸು ಬಂದಿರುತ್ತದೆ ಎಂದರೆ ಸರಿಯಲ್ಲ. ಚೆಕ್ ಅಮಾನ್ಯಗೊಂಡ ನಂತರ ಪಿರ್ಯಾದಿದಾರರು ನನ್ನನ್ನು ಭೇಟಿ ಮಾಡಿ ಚೆಕ್ ಅಮಾನ್ಯವಾದ ವಿಷಯವನ್ನು ತಿಳಿಸಿದ್ದು, ಆ ಸಮಯ ಪುನಃ 3 ತಿಂಗಳ ನಂತರ ಚೆಕ್ಕನ್ನು ಹಾಜರುಪಡಿಸುವಂತೆ ಪಿರ್ಯಾದಿದಾರರಿಗೆ ತಿಳಿಸಿದ್ದೆನು ಎಂದರೆ ಸರಿಯಲ್ಲ. 2 ನೇ ಭಾರಿಯೂ ಸಹ ಪಿರ್ಯಾದಿದಾರರು ನನ್ನ ಸಲಹೆಯಂತೆ ಚೆಕ್ಕನ್ನು ಹಾಜರುಪಡಿಸಿದ್ದು, ಆ ಸಮಯದಲ್ಲಿಯೂ ಸಹ ಸಾಕಷ್ಟು ಹಣ ಇಲ್ಲ ಎಂದು ಅಮಾನ್ಯಗೊಂಡಿರುತ್ತದೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿನಲ್ಲಿ ಸಾಕಷ್ಟು ಹಣವನ್ನು ಇಡದೇ ಚೆಕ್ಕನ್ನು ನೀಡಿರುವುದರಿಂದ ನಾನು ಕಾನೂನಿನ ಅಡಿ ಅಪರಾಧ ಎಸಗಿರುತ್ತೇನೆ ಎಂದರೆ ಸರಿಯಲ್ಲ. ನೋಟಿಸ್ ಜಾರಿಯಾದ ನಂತರ ಅದರಲ್ಲಿ ನಮೂದಾಗಿರುವ ವಿಚಾರಗಳು ಸತ್ಯವಾಗಿದ್ದ ಕಾರಣ ನಾನು ಪಿರ್ಯಾದಿದಾರರಿಗೆ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರರು ನನ್ನ ವಿರುದ್ಧ ದಾಖಲಿಸಿದ ಪ್ರಕರಣವು ಸತ್ಯವಾದ್ದರಿಂದ ನಾನು ನ್ಯಾಯಾಲಯಕ್ಕೆ ಹಾಜರಾದ ನಂತರವೂ ಸಹ ಅವರ ವಿರುದ್ಧ ಕಾನೂನು ಕ್ರಮ ತೆಗೆದು ಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚೆಕ್ ನಲ್ಲಿ ನಮೂದಾಗಿರುವ ಮೊತ್ತ ಮತ್ತು ನ್ಯಾಯಾಲಯದ ಖರ್ಚನ್ನು ಪಿರ್ಯಾದಿದಾರರಿಗೆ ಭರಿಸಲು ಬದ್ಧನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**